ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 57ರ ಮೇರೆಗೆ:

1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ 2011–12ನೇ ಸಾಲಿನ ವಾರ್ಷಿಕ ವರದಿ.
2. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇದರ 2011–12ನೇ ಸಾಲಿನ ವಾರ್ಷಿಕ ವರದಿ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಡೆಟ್‌ನ 2011–12ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

3. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ವಿಷಯ : ವಿಧಾನ ಸೌಧದಲ್ಲಿ ಮಾನ್ಯ ಅರಣ್ಯ ಸಚಿವರಿಗೆ ಕೊಠಡಿ ಒದಗಿಸಿಕೊಡುವ ಸಲುವಾಗಿ ಗೋಡೆಯೊಂದನ್ನು ಒಡೆದು ಹಾಕಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ [ಶಿಕಾರಿಪುರ] :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಮನೆಯಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಸುಂದರವಾದ ವಿಧಾನ ಸೌಧವನ್ನು ಆ ಪುಣ್ಯಾತ್ಮ ಮಾನ್ಯ ಹನುಮಂತಯ್ಯನವರು ಕಟ್ಟಿಸಿ ಹೋಗಿದ್ದಾರೆ. ಅವರು ಒಳಗೆ ಬಂದರೋ, ಇಲ್ಲವೋ, ನನಗೆ ಗೊತ್ತಿಲ್ಲ. ಇವತ್ತು

ವಿಶ್ವ ಪರಿಸರ ದಿವಸವಾಗಿದೆ. ಮಾನ್ಯ ರಮಾನಾಥ ರೈರವರು ಒಂದು ಗೋಡೆಯನ್ನು ಒಡೆಸಿ ಹಾಕಿ ತಮ್ಮ ಕೊಠಡಿಯನ್ನು ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಿಂದೆ ಇದರ ಬಗ್ಗೆ ಸಾಕಷ್ಟು ಗಲಾಟೆಗಳಾದವು, ಗೊಂದಲಗಳು ಉಂಟಾಗಿದ್ದವು. ಇನ್ನು ಮುಂದೆ ಈ ರೀತಿ ಆಗುವುದಿಲ್ಲ ಎಂದು ಸದನದಲ್ಲಿ ಭರವಸೆಯನ್ನು ಕೊಡಲಾಗಿತ್ತು. ಈ ವಿಷಯ ಎರಡೂ ಸದನಗಳಲ್ಲಿ ಚರ್ಚೆಯಾಗಿತ್ತು. ಅಲ್ಲಿ ಸಭಾಪತಿಯವರು ಭರವಸೆ ಕೊಟ್ಟಿದ್ದರು ಮತ್ತು ಇಲ್ಲಿ ಸಭಾಧ್ಯಕ್ಷರು ಭರವಸೆ ಕೊಟ್ಟಿದ್ದರು. ಇದು ಅಕ್ಷಮ್ಯ ಅಪರಾಧ ಸರ್. ಇದು repeat ಆಗಬಾರದು ಎಂದಿದ್ದರೆ, ದಯಮಾಡಿ ಮೊದಲು ಯಾವ ರೀತಿಯಾಗಿ ಇತ್ತೋ, ಅದೇ ರೀತಿಯಲ್ಲಿ ಮಾಡಬೇಕು ಮತ್ತು ಮಾನ್ಯ ಸಚಿವರಿಗೆ warn ಮಾಡಬೇಕು. ಇದು ಅವರ ಮನೆಯಲ್ಲ.

ಅಧ್ಯಕ್ಷರು :– ತಾವು ಪ್ರಸ್ತಾಪಿಸಿರುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ವಾಸ್ತು ಪ್ರಕಾರ ಒಬ್ಬೊಬ್ಬ ಸಚಿವರು ಅವರ ಮನಸ್ಸಿಗೆ ಬಂದಂತೆ ಕೊಠಡಿ ಮಾರ್ಪಾಡು ಮಾಡಿಕೊಳ್ಳುವುದು ಸರಿಯಲ್ಲ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ರೀತಿಯಾಗಿ ಭವ್ಯವಾದ ಈ ಕಟ್ಟಡವನ್ನು ಒಬ್ಬೊಬ್ಬ ಸಚಿವರು ಒಂದೊಂದು ರೀತಿಯಾಗಿ ಮಾರ್ಪಾಡು ಮಾಡುವುದು ಸರಿಯಲ್ಲ. ಶಾಸಕರ ಭವನದಲ್ಲಿ ಶಾಸಕರು ಏನು ಬೇಕಾದರೂ ಒಡೆಸಿ ಹಾಕಬಹುದು. ಇಲ್ಲಿ ಮಂತ್ರಿಗಳು ತಮಗೆ ಖುಷಿ ಬಂದಂತೆ ಒಡೆಸಿ ಹಾಕುವುದು ಸರಿಯಲ್ಲ. ಸರ್, ಎಲ್ಲರಿಗೂ ಅವರು ಮೇಲ್ಪಂಕ್ತಿಯೊಂದನ್ನು ಹಾಕಿಕೊಡಬೇಕಾಗಿತ್ತು. ದಯಮಾಡಿ ಈ ರೀತಿ ಮಾಡುವುದು ಸರಿಯಲ್ಲ, ಇದು ಆಗುವುದಿಲ್ಲ. ಮೊದಲು ಇದ್ದಂತೆ ಗೋಡೆಯನ್ನು ಕಟ್ಟಿಸಿಕೊಡುವುದಾಗಿ ಸದನಕ್ಕೆ ಭರವಸೆ ಕೊಡಬೇಕು. ಅವರಿಗೆ warn ಮಾಡಬೇಕು. ಇದನ್ನು ಈ ಮನೆಯಲ್ಲಿ ಯಾರೂ ಹಗುರವಾಗಿ ತೆಗೆದುಕೊಳ್ಳಬಾರದು. ದಯಮಾಡಿ ನಾನು ಕೈ ಜೋಡಿಸಿ ವಿನಂತಿಮಾಡಿಕೊಳ್ಳುತ್ತೇನೆ. ಈ ರೀತಿಯ ಕೆಲಸಗಳಿಗೆ ಅವಕಾಶ ಮಾಡಿಕೊಡಬಾರದು. ಇದು ಸಾಧ್ಯವಿಲ್ಲ.

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ. ಈಗ ಮಾನ್ಯ ಮುಖ್ಯಮಂತ್ರಿಗಳಿಲ್ಲ.

ಶ್ರೀ ಬಿ.ರಮಾನಾಥ ರೈ [ಅರಣ್ಯ ಸಚಿವರು] :– ಮಾನ್ಯ ಅಧ್ಯಕ್ಷರೆ, ...

ಶ್ರೀ ಬಿ.ಎಸ್.ಯಡಿಯೂರಪ್ಪ :- ಅವರೇನು ಮಾತನಾಡುತ್ತಾರೆ? ಅವರು ಗೋಡೆಯನ್ನು ಒಡೆಸಿ ಹಾಕಿ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ. ಅವರು ಇದನ್ನು ಏನೆಂದು defend ಮಾಡಿಕೊಳ್ಳುತ್ತಾರೆ?

ಅಧ್ಯಕ್ಷರು :- ಆಯಿತು.

ಶ್ರೀ ಬಿ.ರಮಾನಾಥ ರೈ :- ನಾನು ಮಾತನಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಇದು ಆಗುವುದಿಲ್ಲ, ಇದನ್ನು tolerate ಮಾಡಲಿಕ್ಕಾಗುವುದಿಲ್ಲ.

[ಗೊಂದಲ]

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಹಿಂದೆ ಈ ರೀತಿ ಆಗಬಾರದು ಎಂದು ಸಾರ್ವತ್ರಿಕವಾಗಿ ಚರ್ಚೆಗಳಾಗಿದ್ದವು. ಹೀಗೆಲ್ಲಾ ಚರ್ಚೆಗಳಾಗಿದ್ದರೂ ಮಾನ್ಯ ರಮಾನಾಥ ರೈರವರು ಈ ರೀತಿ ಮಾಡಿದ್ದಾರೆಂದರೆ ಹೇಗೆ?

[ಗೊಂದಲ]

ಅಧ್ಯಕ್ಷರು :- ಆಯಿತು, ಸಾಕು. ತಾವು ವಿಷಯವನ್ನು ಪ್ರಸ್ತಾಪಿಸಿದ್ದೀರಿ.

[ಗೊಂದಲ]

ಶ್ರೀ ಆರ್.ವಿ.ದೇಶಪಾಂಡೆ [ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು] :- ಮಾನ್ಯ ಅಧ್ಯಕ್ಷರೆ, ಮಾನ್ಯ ರಮಾನಾಥ ರೈರವರು ಇದರ ಬಗ್ಗೆ ಸಮರ್ಪಕವಾಗಿ ಉತ್ತರ ಕೊಡುತ್ತಾರೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶಂಕರಮೂರ್ತಿಗಳು ಮಾಡಿಸಿದ್ದರಲ್ಲಾ...

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ದೇಶಪಾಂಡೆಯವರೆ, ಈಗ ಮಾಡಿರುವುದನ್ನು ನೀವು defend ಮಾಡಿಕೊಳ್ಳುತ್ತಿದ್ದೀರಾ? ಸಚಿವರು ಮಾಡಿರುವುದನ್ನು ನೀವು ಸಮರ್ಥಿಸುತ್ತೀರಾ?

[ಗೊಂದಲ]

ಅಧ್ಯಕ್ಷರು :- ದಯವಿಟ್ಟು ಒಬ್ಬೊಬ್ಬರಾಗಿ ಮಾತನಾಡಿ. ಒಂದೇ ಸಲ ಎಲ್ಲರೂ ಎದ್ದುನಿಂತು ಮಾತನಾಡತೊಡಗಿದರೆ ಹೇಗೆ? ಒಬ್ಬರು ಮಾತನಾಡಿದ ನಂತರ ಮತ್ತೊಬ್ಬರು ಮಾತನಾಡಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ :- ಯಾರೇ ಮಾಡಿದ್ದರೂ ಅದು ಅಕ್ಷಮ್ಯ ಅಪರಾಧ

[ಗೊಂದಲ]

ಅಧ್ಯಕ್ಷರು :– ಮಾನ್ಯ ಸಚಿವರು ಏನು ಹೇಳುತ್ತಾರೋ, ಕೇಳೋಣ ತಾಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ :– ಈ ರೀತಿ ನೀವು ಅವರನ್ನು defend ಮಾಡಿಕೊಳ್ಳುವುದು ಖಂಡಿತವಾಗಿಯೂ ಗೌರವ ತರುವುದಿಲ್ಲ. ಮಾನ್ಯ ಸಚಿವರು ಕ್ಷಮೆ ಯಾಚಿಸಬೇಕು, ಒಡೆಸಿ ಹಾಕಿರುವ ಗೋಡೆಯನ್ನು ಪುನಃ ಕಟ್ಟಿಸಬೇಕು.

[ಗೊಂದಲ]

ಶ್ರೀ ಬಿ.ರಮಾನಾಥ ರೈ :– ದಯವಿಟ್ಟು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಮಾನ್ಯ ಸಚಿವರು ಏನು ಹೇಳುತ್ತಾರೋ ಕೇಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ :– ನೀವೇ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡುವುದಾದರೆ, ನಮ್ಮದೇನೂ ಅಭ್ಯಂತರವಿಲ್ಲ.

[ಗೊಂದಲ]

ಶ್ರೀ ಬಿ.ರಮಾನಾಥ ರೈ :– ಸನ್ಮಾನ್ಯ ಅಧ್ಯಕ್ಷರೆ, ನಾನು ಇಂತಹ ರೂಮ್ ಬೇಕೆಂದು ಕೇಳಿಲ್ಲ. ನಾನು ರೂಮ್‌ಗೆ ಇನ್ನೂ ಪ್ರವೇಶ ಆಗಿಲ್ಲ. ನಾನು ಯಾವುದೋ ರೂಮ್ ಕೇಳಿದ್ದೆ. ನಾನು ತಿರುಪತಿಗೆ ಹೋಗಿದ್ದೆ. ನಾನು ಅಲ್ಲಿಂದ ವಾಪಸ್ ಬಂದಾಗ ಅಲ್ಲಿ ಯಾರೋ ಕುಳಿತಿದ್ದರು. ನಾನು ಏನೂ ಮಾತನಾಡಲಿಲ್ಲ. ನಾನು ಹೇಳಿದೆ...

[ಗೊಂದಲ]

ಅಧ್ಯಕ್ಷರು :– ಅವರು ಏನು ಹೇಳುತ್ತಾರೋ ಕೇಳೋಣ ಇರಿ. ಮಾನ್ಯ ಸಚಿವರೆ, ತಾವು ಹೇಳಬೇಕಾಗಿರುವುದನ್ನು ಸಂಕ್ಷಿಪ್ತವಾಗಿ ಹೇಳಿ. [ಗೊಂದಲ]

ಶ್ರೀ ಬಿ.ರಮಾನಾಥ ರೈ :– ನಾನು ಹೇಳುತ್ತೇನೆ..

[ಗೊಂದಲ]

ಶ್ರೀ ಆರ್.ಅಶೋಕ :– ಯಾರೋ ಕುಳಿತಿದ್ದರು ಎಂದರೆ ಏನರ್ಥ?

[ಗೊಂದಲ]

ಅಧ್ಯಕ್ಷರು :– ಮಾನ್ಯ ಸಚಿವರು ಏನು ಹೇಳುತ್ತಾರೋ ಕೇಳೋಣ ಇರಿ.

[ಗೊಂದಲ]

ಶ್ರೀ ಆರ್.ಅಶೋಕ :– ವಿಧಾನ ಸೌಧದಲ್ಲಿ ಯಾರಾದರೂ ಬಂದು ಕುಳಿತುಕೊಳ್ಳಬಹುದೇ? ಯಾರು ಬಂದು ಕುಳಿತುಕೊಳ್ಳುತ್ತಾರೆ, ಸರ್? ನಾವು ಇಲ್ಲಿಗೆ ಬಂದು ಕುಳಿತುಕೊಳ್ಳಬೇಕಾದರೂ permission ಬೇಕಲ್ಲವೇ?

[ಗೊಂದಲ]

ಅಧ್ಯಕ್ಷರು :– ಎರಡು ನಿಮಿಷ ಅವರು ಏನು ಹೇಳುತ್ತಾರೋ ಕೇಳೋಣ ಇರಿ. ನಂತರ ತಾವು ಮಾತನಾಡುವಿರಂತೆ. Please, ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಟಿ.ಬಿ.ಜಯಚಂದ್ರ :– ನೇರವಾಗಿ ಮಾನ್ಯ ರಮಾನಾಥ ರೈರವರ ಮೇಲೆ ಆರೋಪವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಉತ್ತರ ಕೊಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಆಯಿತು, ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ :– ನೇರವಾಗಿ ಈ ಸದನದ ಸದಸ್ಯರೊಬ್ಬರ ಮೇಲೆ ನೀವು ಆರೋಪ ಮಾಡುತ್ತಿದ್ದೀರಿ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :– ಆಯಿತು, ಹೇಳಿ.

ಶ್ರೀ ಬಿ.ರಮಾನಾಥ ರೈ :– ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

ಅಧ್ಯಕ್ಷರು :– ಅವರು ಮಾತನಾಡಲಿಕ್ಕೆ ಅವಕಾಶ ಕೊಡುವುದಲ್ಲ, ನಾನು ಅದಕ್ಕೆ ಅವಕಾಶ ಕೊಡುವುದು. ಆದ್ದರಿಂದ, ನೀವು ನನ್ನ ಕಡೆಗೆ ತಿರುಗಿ ಮಾತನಾಡಿ.

ಶ್ರೀ ಬಿ.ರಮಾನಾಥ ರೈ :– ಸನ್ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. ನಾನು ನನ್ನ ವಿಷಯವನ್ನು ಹೇಳುತ್ತೇನೆ.

ಅಧ್ಯಕ್ಷರು :– ನಾನು ಈಗಾಗಲೇ ನಿಮಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆ ದಯವಿಟ್ಟು ತಾವು ಮಾತನಾಡಿ.

ಶ್ರೀ ಬಿ.ರಮಾನಾಥ ರೈ :– ಮಾನ್ಯ ಪುಟ್ಟಣ್ಣಯ್ಯನವರೆ, ನಾನು ವಾಸ್ತುಗೀಸ್ತು ನಂಬುವುದಿಲ್ಲ. ಈ ರೀತಿ ಮಾಡಿ ಎಂದು ನಾನು ಕೇಳಿರಲಿಲ್ಲ. ಈ ರೀತಿ ಆಗುತ್ತಿರುವುದು ನನ್ನ ಗಮನಕ್ಕೆ ಬಂದಿರಲಿಲ್ಲ. ನಾನು ಟಿ.ವಿ. ನೋಡುತ್ತಿರುವಾಗ ಅದು ನನ್ನ ಗಮನಕ್ಕೆ ಬಂದಿತು. ನಾನು ಬಂದಾಗ ನನಗೆ ರೂಮ್ ಇರಲಿಲ್ಲ. ನಾನು ಒಂದು ಮಾತನ್ನು ಹೇಳಿದೆ. ಸಚಿವಾಲಯ ಎಲ್ಲಿದೆಯೋ, ಅಲ್ಲಿಯೇ ಸಚಿವರ ಕೊಠಡಿ ಇರುವುದು ಒಳ್ಳೆಯದು ಎಂಬ ಮಾತನ್ನು ನಾನು ಹೇಳಿದ್ದೆ. ವಿಕಾಸಸೌಧದಲ್ಲಿ ನನ್ನ ಸಚಿವಾಲಯ ಇಲ್ಲ, ಅದು ಎಂ.ಎಸ್.ಬಿಲ್ಡಿಂಗ್‌ನಲ್ಲಿದೆ...

ಅಧ್ಯಕ್ಷರು :– ಮಾನ್ಯ ರೈರವರೆ, ನಾನು ಸಿಂಪಲ್ಲಾಗಿ ಹೇಳಿ ಬಿಡುತ್ತೇನೆ ಕೇಳಿ. ಗೋಡೆ ಒಡೆದಿರುವುದು ಹೌದೋ, ಅಲ್ಲವೋ? ಅದಕ್ಕೇನು ಕಾರಣ? ಅಷ್ಟಕ್ಕೆ ಮಾತ್ರ ಉತ್ತರ ಹೇಳಿ.

ಶ್ರೀ ಬಿ.ರಮಾನಾಥ ರೈ :– ನಾನು ಎಲ್ಲವನ್ನೂ ಹೇಳುತ್ತೇನೆ. ನಾನು ಗೋಡೆ ಒಡೆಸಿಲ್ಲ, ನಾನು ಅಲ್ಲಿಗೆ ಪ್ರವೇಶ ಆಗಿಲ್ಲ. ನಾನು ಮಂತ್ರಿಯಾಗಿ 7 ವರ್ಷಗಳಿದ್ದೆ. ನಾನು ಬೆಂಗಳೂರಿನಲ್ಲಿ ಮನೆ ಮಾಡಿಲ್ಲ.

ಅಧ್ಯಕ್ಷರು :– ಅದೆಲ್ಲಾ ಅನವಶ್ಯಕ.

ಶ್ರೀ ಬಿ.ರಮಾನಾಥ ರೈ :– ಎಲ್ಲವನ್ನೂ ಹೇಳುತ್ತೇನೆ, ಸರ್. ನಾನು ನನ್ನ ತಾಲ್ಲೂಕು ಕೇಂದ್ರದಲ್ಲೂ ಮನೆ ಮಾಡಿಲ್ಲ. ನನಗೊಂದು ಒಳ್ಳೆಯ ಆಫೀಸ್ ಮತ್ತು ಮನೆಯನ್ನು ಕೊಡಿ ಎಂದು ಕೇಳಿದ್ದೆ. ಅದೇನೂ ತಪ್ಪಲ್ಲ. ಆದರೆ ನನಗೆ ಯಾವ ಆಫೀಸ್ ಕೊಡಬೇಕು? ಅದು ಹೀಗೇ ಆಗಬೇಕೆಂದು ನಾನೆಲ್ಲೂ ಹೇಳಿಲ್ಲ. DPARನವರು ನನಗೆ ದೊಡ್ಡ ರೂಮ್‌ವೊಂದನ್ನು ಕೊಡುತ್ತೇನೆಂದು ಹೇಳಿದ್ದರು. ನಾನು ಇನ್ನೂ ಪ್ರವೇಶ ಮಾಡಿಲ್ಲ. ನಾನು ಹೀಗೆಯೇ ಆಗಬೇಕೆಂದು ಹೇಳಿಲ್ಲ.

ಅಧ್ಯಕ್ಷರು :– ಹಾಗಾದರೆ ನಿಮ್ಮ ಅನುಮತಿ ಇಲ್ಲದೆ ಅದು ಆಗಿದೆಯೇ?

ಶ್ರೀ ಬಿ.ರಮಾನಾಥ ರೈ :– ನನಗೆ ಅನುಮತಿ ಕೇಳಿಲ್ಲ. DPAR ನವರು ನನಗೆ ದೊಡ್ಡ ರೂಮ್ ಮಾಡಿಸಿಕೊಡುತ್ತೇನೆಂದು ಹೇಳಿದ್ದರು. ನಾನು ಒಡೆಸಲಿಕ್ಕೆ ಹೇಳಿಲ್ಲ. ಡಿಪಿಎಆರ್ ಅವರು ದೊಡ್ಡ ರೂಮ್ ಅನ್ನು ಮಾಡಿಸಿ ಕೊಡುತ್ತೇನೆಂದು ಹೇಳಿದರು ಗೋಡೆ ಒಡೆಸಿದ್ದು ನಾನಲ್ಲ, ಡಿಪಿಎಆರ್ ನವರು, ನಾನು ಒಡೆಸುವುದಕ್ಕೆ ಹೇಳಲಿಲ್ಲ, ವಾಸ್ತು ವಿಚಾರವಾಗಿ ನಾನು ಮಾತನಾಡಿಯೂ ಇಲ್ಲ. ಹೇಳಿದ್ದೂ ಇಲ್ಲ, ನನಗೆ ಅದರಲ್ಲಿ ನಂಬಿಕೆ ಇಲ್ಲ, ಗೋಡೆ ಒಡೆಯಿರಿ ಎಂದು ನಾನು ಹೇಳಿಲ್ಲವೆಂದು ಎಲ್ಲಿ ಬೇಕಾದರೂ ಹೇಳುತ್ತೇನೆ..

[ಗೊಂದಲ]

ಅಧ್ಯಕ್ಷರು : ಈಗ ಅವರ [ಮಂತ್ರಿಗಳ] ಆಜ್ಞೆ ಇಲ್ಲದೆ ಅದು ಆಗಿದೆ..

ಶ್ರೀ ಬಿ.ರಮಾನಾಥ ರೈ :– ನನಗೆ ಒಳ್ಳೆಯ ರೂಮ್ ಕೊಡಬೇಕೆಂದು ಕೇಳಿದ್ದೇನೆ ನನಗೆ ಬೆಂಗಳೂರಿನಲ್ಲಿ ಮನೆ ಇಲ್ಲ, ನನಗೊಂದು ಮನೆ ಕೊಡಿ, ರೂಮ್ ಕೊಡಿ ಎಂದಷ್ಟೆ ಕೇಳಿದ್ದೇನೆ ಅದನ್ನು ಬಿಟ್ಟು ಮತ್ತೆ ಯಾವುದನ್ನೂ ನಾನು ಕೇಳಿಲ್ಲ.

[ಗೊಂದಲ]

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ನನಗೆ ಬೆಂಗಳೂರಿನಲ್ಲಿ ಮನೆ ಇಲ್ಲ, ನನಗೆ ಏನೂ ಇಲ್ಲ, ಕೊಡುವುದಾದರೆ ದಯವಿಟ್ಟು ದೊಡ್ಡದಾಗಿರುವುದನ್ನು ಕೊಡಿ ಎಂದು ಮಂತ್ರಿಗಳೇ ಹೇಳಿದ್ದಾರೆ. ಅದು ಸಣ್ಣ ರೂಮ್ ಇತ್ತು. ದೊಡ್ಡ ರೂಮ್ ಆಗಿ ಮಾಡಿಕೊಟ್ಟಿದ್ದಾರೆ. ಮತ್ತೆ ಮಂತ್ರಿಗಳು ನಾನು ಹೇಳೇ ಇಲ್ಲ ಹಾಗೆ ಮಾಡಿದರೆಂದು ಹೇಳುತ್ತಿದ್ದಾರೆ, ಅವರೇ ಒಪ್ಪಿಕೊಂಡಿದ್ದಾರೆ, ಅವರು[ಮಂತ್ರಿಗಳು] ಹೇಳಲಿಲ್ಲವೆಂದರೆ, ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ. ಈಗ ಯಾರು ಡೈರೆಕ್ಷನ್ ಕೊಟ್ಟರು, ಸರ್ಕಾರದ ಆದೇಶವಿಲ್ಲದೆ ಹೇಗೆ ಒಡೆಯುತ್ತಾರೆ? ಅದೂ ವಿಧಾನಸೌಧ, ವಿಕಾಸ ಸೌಧದಲ್ಲಿ ಸರ್ಕಾರದ ಆದೇಶವಿಲ್ಲದೆ, ಒಬ್ಬ ಖಾಸಗಿ ಗುತ್ತಿಗೆದಾರ ಬಂದು ವಿಧಾನ ಸೌಧ ಎಂಟ್ರಿಯಾಗಿ ಒಡೆಯುವುದಕ್ಕೆ ಸಾಧ್ಯವೇ, ಹಾಗಾದರೆ ವಿಧಾನ ಸೌಧಕ್ಕೆ ಯಾರು ಬೇಕಾದರೂ ಬರಬಹುದಾ? ಮಾನ್ಯ ಮಂತ್ರಿಗಳ ಆದೇಶವಿಲ್ಲದೆ ಗೋಡೆ ಒಡೆದಿರುವುದು ಅಪರಾಧ. ಅದರಿಂದ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಈಗ ಅವರು[ಮಂತ್ರಿಗಳು] ಸದನದ ಮೂಲಕ ನಾನು ಹೊಣೆಗಾರನಲ್ಲವೆಂದು ಸ್ಪಷ್ಟಪಡಿಸಿದ್ದಾರೆ, ಸಂಬಂಧಪಟ್ಟ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಮುಂದೆ ಈ ರೀತಿ ಘಟನೆ ಮರುಕಳಿಸಬಾರದು.

ಅಧ್ಯಕ್ಷರು: ಮುಂದೆ ಯಾರು ಹುಟ್ಟುತ್ತಾರೋ ಸಾಯುತ್ತಾರೋ ಏತಕ್ಕೆ ಅದೆಲ್ಲಾ?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಖಾಸಗಿಯವರು ಬಂದು ಒಡೆದರೆಂದು ಮಾನ್ಯ ಸದಸ್ಯರಾದ ಅಶೋಕ್ ಅವರು ಹೇಳಿದರು, ಖಾಸಗಿಯವರು ಬಂದು ಒಡೆದಿಲ್ಲ, ಡಿಪಿಎಆರ್ ಅವರೇ ನಮಗೆ ಮಾಡಿಕೊಟ್ಟಿದ್ದು.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] :– ಮಾನ್ಯ ಅಧ್ಯಕ್ಷರು ತಾವು ಆ ಪೀಠದಲ್ಲಿ ಕುಳಿತಂಥ ಸಂದರ್ಭದಲ್ಲಿ ಯಾರೋ ಮಹಾನುಭಾವರು ಇಂಥ ಕಟ್ಟಡಗಳನ್ನು ಕಟ್ಟಿಕೊಡುತ್ತಾರೆ, ಇದು ಮನುಷ್ಯನನ್ನು ಸೃಷ್ಟಿ ಮಾಡುತ್ತದೆ ಎಂದು ಒಂದು ಮಾತನ್ನು ಜ್ಞಾಪಕ ಮಾಡಿದ್ದೆ. ಇದನ್ನು ಕಟ್ಟಬೇಕಾದರೆ ಹನುಮಂತಯ್ಯನವರು ಲಂಡನ್‌ನಲ್ಲಿರುವ ಪಾರ್ಲಿಮೆಂಟ್ ಅನ್ನು ನೋಡಿ ಅದನ್ನು ಆಧರಿಸಿಯೇ ಕಟ್ಟಿರುವುದು. ಹಾಗಾಗಿ ಇಂಗ್ಲೆಂಡಿನಲ್ಲಿರುವ ಪಾರ್ಲಿಮೆಂಟ್ 1100 ವರ್ಷ ಹಳೆಯದಾಗಿರುವ ಕಟ್ಟಡ.

Antique value ಏನೆಂಬುದನ್ನು ಅಲ್ಲಿ ನೋಡಬಹುದು, ಹಾಗಾಗಿ ಆ ದೂರದೃಷ್ಟಿ ಇಟ್ಟುಕೊಂಡು ಕಟ್ಟಿರುವ ಕಟ್ಟಡವನ್ನು ಇನ್ನು ಯಾರೂ ಕೂಡ ಬದಲು ಮಾಡಬಾರದು. ಏಕೆಂದರೆ, ಈಗಾಗಲೇ ಬೇರೆ ಬೇರೆಯವರು ಅಧಿಕಾರ ಮಾಡುವ ಸಂದರ್ಭದಲ್ಲಿ ಆಗಿ ಹೋಗಿದೆ. ಆಗ ಹನುಮಂತಯ್ಯನವರು ಕಟ್ಟಬೇಕಾದರೆ ಅವರಿಗೆ ವಾಸ್ತು ಕಲ್ಪನೆ ಇರಲಿಲ್ಲ, ಈಗ ವಾಸ್ತು ಕಲ್ಪನೆ ಎಂದು ಬಂದು ಎಲ್ಲರಿಗೂ ತಲೆಕೆಡುತ್ತಿದೆ.

ಅಧ್ಯಕ್ಷರು: ಅವರು ಸ್ವಲ್ಪ ವೈಜ್ಞಾನಿಕ ವಿಚಾರವಂತರು.

ಶ್ರೀ ಟಿ.ಬಿ.ಜಯಚಂದ್ರ: ಯಾರೂ ಕೂಡ ಬದಲಾವಣೆ ಮಾಡದಿರುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದೊಂದು ಕೆಟ್ಟ ಪರಿಪಾಠ ನಡೆದಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾವಿರುವುದೆಲ್ಲಾ ಸರ್ಕಾರಿ ಮನೆಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ಸರ್ಕಾರಿ ಮನೆ, ಕಚೇರಿಗಳಲ್ಲಿ ಹೇಗೆ ನಮ್ಮ ಮನಸ್ಸಿಗೆ ಬಂದಂತೆ ಬದಲಾವಣೆ ಮಾಡುವುದಕ್ಕಾಗುತ್ತದೆ? ಈಗ ವಾಸ್ತು ಎಂದು ಹೇಳಿದಿರಿ ಬಡವನಿಗೆ 20x20 ಸೈಟ್ ಹಂಚುತ್ತೇವೆ ಅವನು ಯಾವ ದಿಕ್ಕಿಗೆ ಮನೆ ಕಟ್ಟುತ್ತಾನೆ? ಬಡವನಿಗೆ ಯಾವ ವಾಸ್ತು ಇದೆ? ಶ್ರೀಮಂತರಿಗೆ, ದೊಡ್ಡ ದೊಡ್ಡ ನಿವೇಶನಗಳಿಗೆ ವಾಸ್ತು ಇದೆ...

ಅಧ್ಯಕ್ಷರು: ಸಾಕಷ್ಟು, ಇದೆಲ್ಲಾ ಅನವಶ್ಯಕ.

ಶ್ರೀ ಬಿ. ರಮಾನಾಥ ರೈ: ನಾನು ಪ್ರಮಾಣವಾಗಿ ಹೇಳುತ್ತೇನೆ, ನನಗೆ ವಾಸ್ತುವಿನಲ್ಲಿ ನಂಬಿಕೆ ಇಲ್ಲ, ನಾನು ವಾಸ್ತು ವಿಷಯವನ್ನು ಹೇಳಿಲ್ಲ. ಒಳ್ಳೆಯ ರೂಮ್ ಕೊಡಬೇಕೆಂದು ಅಷ್ಟೇ ಕೇಳಿದ್ದೇನೆ, ಕೊಟ್ಟಿದ್ದಾರೆ, ನಾನೇನು ಗೋಡೆಯನ್ನು ಒಡೆಸಿಲ್ಲ ನಾನೇನೂ ತಪ್ಪು ಮಾಡಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ತಾವು ಯಜ್ಞಯಾಗಾದಿಗಳು, ವಾಸ್ತು, ಸರ್ವಧರ್ಮಗಳ ಜಾತ್ಯಾತೀತ ಜಾಗದಲ್ಲಿ ಇದೆಲ್ಲಾ ವಿಧಾನ ಸೌಧದಲ್ಲಿ ಚರ್ಚೆ..

ಶ್ರೀ ಬಿ.ಎಸ್.ಯಡಿಯೂರಪ್ಪ : ತಮ್ಮ ಮನಸ್ಸಿಗೆ ಬಂದಂತೆ ವಾಸ್ತು ಬದಲಾವಣೆ ಮಾಡಿದ್ದಾರೆ, ಅದು ಸರಿಯಲ್ಲವೆಂದು ಹೇಳಬೇಕು.

ಶ್ರೀ ಬಿ. ರಮಾನಾಥ ರೈ: ಇಲ್ಲಿ ವಿರೋಧ ಪಕ್ಷದವರ ಮೊಗಸಾಲೆಯನ್ನು ಮುಚ್ಚಿಸಿದವರು ಯಾರು? ಈ ಸದನದಲ್ಲಿ ಅದಕ್ಕೆ ಅವಕಾಶ ಉಂಟಾ? ನಾವು ಆ ರೀತಿ ಮಾಡಿದವರಲ್ಲ ನಾನು ಕೇಳಿದ್ದು ಒಳ್ಳೆಯ ರೂಮ್ ಮಾತ್ರ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಈ ವಿಷಯ ಸದನದಲ್ಲಿ ಚರ್ಚೆಯೇ ಆಗಬಾರದು, ಸದನಕ್ಕೆ ಬಹಳ ದೊಡ್ಡ ಅವಮಾನ, ಹಾಗಾದರೆ ಅಂಗಾಂಗಗಳ ವಾಸ್ತು ಹೆಚ್ಚು ಕಡಿಮೆಯಾಗಿದೆ ಎಂದರೆ ಏನು ಮಾಡಬೇಕು, ಸರ್? ಕಿವಿ

ತೆಗೆದು ಈ ನೇರಕ್ಕೆ ಇಟ್ಟುಕೊಳ್ಳಬೇಕಾ? ದಯವಿಟ್ಟು, ಇಂಥ ಅಜ್ಞಾನ ಮೌಢ್ಯತೆ ವಿಷಯದ ಚರ್ಚೆ ಯಾರೂ ಮಾಡಬಾರದೆಂದು ಒಂದು ರೆಸಲ್ಯೂಷನ್ ಮಾಡಿ.

ಅಧ್ಯಕ್ಷರು : ಕ್ಲೋಸ್ ಕ್ಲೋಸ್, ಬಿಡ್ರಿ, ಮುಂದಿನದನ್ನು ತೆಗೆದುಕೊಳ್ಳಿ.

4. ನಿಯಮ 60ರ ಮೇರೆಗೆ ಚರ್ಚೆಗೆ ಅನುಮತಿ ಕೋರಿಕೆ

ವಿಷಯ : ರಾಜ್ಯದಲ್ಲಿ ತೀವ್ರತರವಾದ ಬರಗಾಲವಿದ್ದು, ತೆಂಗು ಬೆಳೆ ಸಂಪೂರ್ಣ ನಾಶವಾಗಿದ್ದು, ಆದರಿಂದ ತೆಂಗು ಉತ್ಪನ್ನ ಪಾತಳಕ್ಕೆ ಹೋಗಿ ರೈತರು ಸಂಕಷ್ಟಕ್ಕೆ ಒಳಗಾಗಿ ಸರ್ಕಾರ ಸ್ಪಂದಿಸದಿರುವ ಬಗ್ಗೆ.

ಶ್ರೀ ಕೆ.ಎಂ.ತಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಈ ತೀವ್ರವಾದ ಬರಗಾಲದಲ್ಲಿ, ಏನು ತೆಂಗು ಬೆಳೆಯುವ ಪ್ರದೇಶದಲ್ಲಿ, ಬಹಳಷ್ಟು ತೆಂಗುಗಳು ಸುಳಿ ಎಲ್ಲಾ ಕಳಚಿ ಬಿದ್ದು ಲಕ್ಷಾಂತರ ಮರಗಳು ಸರ್ವನಾಶವಾಗಿ ಹೋಗಿವೆ. ನನ್ನ ಕ್ಷೇತ್ರ ಒಂದರಲ್ಲೇ ಸುಮಾರು 1 ಲಕ್ಷಕ್ಕೂ ಅಧಿಕವಾಗಿ ಮರಗಳು ಬಿದ್ದಿರುವ ಮಾಹಿತಿಯನ್ನು ತಮ್ಮ ಅವಗಾಹನೆಗೆ ದಾಖಲೆ ಸಮೇತ ತರುತ್ತಿದ್ದೇನೆ. ಲಕ್ಷ ಮರಗಳನ್ನು ತರುವುದಕ್ಕಾಗುವುದಿಲ್ಲ, ಎಷ್ಟು ತರಬೇಕೋ ಅಷ್ಟನ್ನು ತಂದಿದ್ದೇನೆ, ಹೋಗಿ ನೋಡಿ ಲಕ್ಷ ಮರಗಳು ಸಿಗುತ್ತವೆ. ನಮಗೆ ತೆಂಗು ಬಹಳ ಪ್ರಮುಖವಾಗಿರುವ ಬೆಳೆ. "ಕಾಮಧೇನು, ಕಲ್ಪವೃಕ್ಷ" ಎನ್ನುವ ರೀತಿಯಲ್ಲಿ ಈ ತೆಂಗನ್ನು ಬಿಟ್ಟು ಬೇರೆ ಬೆಳೆಯನ್ನು, ನಮ್ಮ 7-8 ಜಿಲ್ಲೆಗಳಾದ ತಿಪಟೂರು, ಅರಸೀಕೆರೆ, ಚನ್ನರಾಯಪಟ್ಟಣ.....

ಅಧ್ಯಕ್ಷರು : ಈಗ ವಿವರವಾದ ಚರ್ಚೆ ಮಾಡುವುದು ಬೇಡ.

ಶ್ರೀ ಕೆ.ಎಂ.ತಿವಲಿಂಗೇಗೌಡ : ನಿಯಮ 60ರಡಿಯಲ್ಲಿ ನೀವು ಅಕ್ಸೆಪ್ಟ್ ಮಾಡಬೇಕಲ್ಲ? ನಿಯಮ 60ರ ಅಡಿಯಲ್ಲಿ ನಾನು ಏತಕ್ಕೋಸ್ಕರ ತರುತ್ತಿದ್ದೇನೆ, ಯಾವ ಉದ್ದೇಶವಿದೆ ಎನ್ನುವ ಮಾಹಿತಿಯನ್ನು ತಮ್ಮ ಗಮನಕ್ಕೆ ತರಬೇಕಲ್ಲಾ? ಅದಕ್ಕೆ ನಿಯಮ 60ರ ಅಡಿಯಲ್ಲಿ ಇದನ್ನೆಲ್ಲಾ ಸವಿಸ್ತಾರವಾಗಿ ಹೇಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] : ಈಗ ತಂದಿರುವ ವಿಚಾರ, ರಾಜ್ಯದಲ್ಲಿ ತೀವ್ರತರವಾದ ಬರಗಾಲವಿದ್ದು, ತೆಂಗು ಬೆಳೆ ಸಂಪೂರ್ಣ ನಾಶವಾಗಿದ್ದು, ಅದರಿಂದ ತೆಂಗು ಉತ್ಪನ್ನ ಪಾತಳಕ್ಕೆ ಹೋಗಿ ಸಂಕಷ್ಟಕ್ಕೆ ಒಳಗಾಗಿರುವ ರೈತರ ಬಗ್ಗೆ ಸ್ಪಂದಿಸದಿರುವ ಬಗ್ಗೆ, ನಿಜ, ನಾನು ಒಪ್ಪುತ್ತೇನೆ, ನಾನೂ ಕೂಡ ಇವತ್ತು ತೆಂಗು ಬೆಳೆಗಾರರ ಪ್ರದೇಶದಿಂದ ಬಂದಿರುವವನು, ಅದರ ಅನುಭವವಿದೆ. ಈ ಬಗ್ಗೆ